**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಸಂಪಿಗೆ ರಸ್ತೆ, 18ನೇ ಕ್ರಾಸ್,ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ:ಪಪೂಶಿ/ಶೈಶಾ/ಇತರೆ/2016-17 ದಿನಾಂಕ24/05/2016

**ಸುತ್ತೋಲೆ**

ವಿಷಯ: ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳ ವಿದ್ಯಾರ್ಥಿಗಳನ್ನು ಬೋಧನಾ ಅವಧಿಯಲ್ಲಿ ಪ್ರತಿ ತಿಂಗಳು 02 ಗಂಟೆ ಸಮಯವನ್ನು ಸ್ವಚ್ಛತಾಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸುವ ಬಗ್ಗೆ.

ಉಲ್ಲೇಖ: 1) ಸಂಖ್ಯೆ:ಡಿಎಸ್ಇಆರ್‌ಟಿ/ಇಕ್ಯೂಎಂಸಿ/ಶಾಕಾವಿನಸ್ವ/2015-16 ದಿನಾಂಕ 05/09/2015.

2) ಸಂಖ್ಯೆ:ಪಪೂಶಿಇ/ಶೈಶಾ-05/ಪಪೂಕವಾಭಾ/2013 ದಿನಾಂಕ 23/06/15.

*****

ಮೇಲ್ಕಂಡ ಉಲ್ಲೇಖ-02 ರನ್ವಯ ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಪ್ರಾಯೋಗಿಕ ತರಗತಿಗಳನ್ನು ಹೊರತುಪಡಿಸಿದ ಇತರೆ ವಿಷಯಗಳಲ್ಲಿ ಎಲ್ಲಾ ಉಪನ್ಯಾಸಕರು ವಾರದಲ್ಲಿ ಪ್ರತೀ ವರ್ಗಕ್ಕೆ 04 ಗಂಟೆಗಳ ಬೋಧನೆ ಮಾಡುವುದು ಹಾಗೂ ಒಂದು(01) ಅವಧಿಯಲ್ಲಿ ವಿದ್ಯಾರ್ಥಿಗಳಿಂದ ವಿಚಾರ ಸಂಕಿರಣ, ಪ್ರಾಯೋಗಿಕ ಚಟುವಟಿಕೆ, ಸಂಪನ್ಮೂಲ ವ್ಯಕ್ತಿಗಳಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ **ಜೊತೆಗೆ ನಗರ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಕ್ರಮಗಳು, ಪ್ರಧಾನಮಂತ್ರಿಯವರ ಸ್ವಚ್ಛ ಭಾರತ್ ಅಭಿಯಾನವನ್ನು ಯಶಸ್ವಿಗೊಳಿಸಲು ಕಾರ್ಯಕ್ರಮಗಳನ್ನು ಕಡ್ಡಾಯವಾಗಿ** ನಿರ್ವಹಿಸಲು ಪ್ರಾಂಶುಪಾಲರುಗಳಿಗೆ ಸೂಚಿಸಿದೆ. ಪ್ರತಿ ತಿಂಗಳ 02 ಅವಧಿಗಳನ್ನು ನಗರ ಸ್ವಚ್ಛತೆ ಮತ್ತು ಸ್ವಚ್ಛ ಭಾರತ ಅಭಿಯಾನಕ್ಕೆ ಮೀಸಲಿಟ್ಟು ವರದಿಯನ್ನು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸಲು ತಿಳಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ- ಜಿಲ್ಲಾ ಉಪ ನಿರ್ದೇಶಕರುಗಳ ಮೂಲಕ.
3. ಶಾಖಾಧಿಕಾರಿಗಳು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳ ವೆಬ್ ಸೈಟ್‌ಗೆ ಅಳವಡಿಸಲು.
4. ನಿರ್ದೇಶಕರು, ರಾಜ್ಯ ಶಿಕ್ಷಣ ತರಬೇತಿ ಮತ್ತು ಸಂಶೋಧನೆ ಇಲಾಖೆ, ನಂ 0, 100 ಅಡಿ ರಿಂಗ್ ರಸ್ತೆ, ಬೆಂಗಳೂರು-85
5. ಕಛೇರಿ ಪ್ರತಿ.